**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**
**ದಿನಾಂಕ 01-04-2023.**
**ಪಾಟೀ ಸವಾಲು - ಪ್ರತಿವಾದಿ ಪರವಾಗಿ ಶ್ರೀ ಕೆ.ಕೆ.ಎಸ್. ವಕೀಲರಿಂದಃ**

1. ನಿಪಿ-20 (1 ರಿಂದ 6) ಕಟ್ಟಡ ಥಣಿಸಂದ್ರ ಗ್ರಾಮದ ಸರ್ವೇ ನಂ.40/1 ರಲ್ಲಿ ಇದೆ. ಸದರಿ ಸರ್ವೇ ನಂಬರ್ ನಲ್ಲಿ 34 ಗುಂಟೆ ಜಮೀನನ್ನು ಬಿಡಿಎನವರು ಅರ್ಕಾವತಿ ಲೇಔಟ್ ಮಾಡಲು ಪ್ರಾರಂಭಿಕ ಅಧಿಸೂಚನೆ 03-02-2003 ಮತ್ತು ಅಂತಿಮ ಅಧಿಸೂಚನೆ ದಿಃ 18-06-2004 ರ ಪ್ರಕಾರ ಭೂ ಸ್ವಾಧೀನ ಮಾಡಿಕೊಂಡಿದೆ ಎಂದರೆ ಸರಿಯಲ್ಲ. ದಿಃ 09-05-2006 ರಂದು ಬಿಡಿಎನವರು ಸದರಿ ಜಮೀನಿನ ಸ್ವಾಧೀನ ಪಡೆದುಕೊಂಡಿದೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಮಾಲೀಕರು ಎಲ್ ಎ ಸಿ ನಂ.119/13 ನ್ನು ದಾಖಲು ಮಾಡಿ ಪರಿಹಾರ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಬಿಡಿಎನವರು ಸದರಿ ಜಮೀನನ್ನು ಸ್ವಾಧೀನಪಡಿಸಿಕೂಂಡ ನಂತರ ಅರ್ಕಾವತಿ ಲೇಔಟ್ ಮಾಡಿ ನಿವೇಶನಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಿದ್ದು ಫಲಾನುಭವಿಗಳು ಅವರವರಿಗೆ ಮಂಜೂರಾದ ನಿವೇಶನದ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಸದರಿ ಜಮೀನು ಭೂ ಸ್ವಾಧೀನವಾದ ವಿಚಾರ ನನಗೆ ಗೊತ್ತಿದ್ದರೂ ಸಹ 2020 ರಲ್ಲಿ ನಾನು ಮತ್ತು ಇತರರು ಸೇರಿ ಸುಳ್ಳು ಕ್ರಯ ಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-20(1 ರಿಂದ 6) ಫೋಟೋದಲ್ಲಿ

This is a True Copy of the Court Records Online. Authenticated @ districts.ecourtsindia.com/cnr/KABC0A0039022022/truecopy/order-4.pdf

ಕಾಣುವ ಕಟ್ಟಡ ಥಣಿಸಂದ್ರ ಗ್ರಾಮದ ಸರ್ವೆ ನಂ.40/1 ರಲ್ಲಿ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಬಿಡಿಎನವರು ಭೂ ಸ್ವಾಧೀನಪಡಿಸಿಕೊಂಡ ಜಮೀನನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಕೇಸು ಮಾಡಿದ್ದೇನೆ ಎಂದರೆ ಸರಿಯಲ್ಲ. ಬಿಡಿಎನವರು ವಶಪಡಿಸಿಕೊಂಡ ಥಣಿಸಂದ್ರ ಗ್ರಾಮದ ಸರ್ವೆ ನಂ.40/1 ಜಮೀನಿನ ಮೇಲೆ ನನಗೆ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

74 ನೇ ಅ.ನ.ಸಿ. ನ್ಯಾಯಾಧೀಶರು (ಸಿಸಿಎಚ್-75), ಮೇಯೋ ಹಾಲ್ ವಿಭಾಗ, ಬೆಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KABC0A0039022022/truecopy/order-4.pdf

www.ecourtsindia.com